**ಪ್ರಮಾಣ ವಚನ ಭೋದಿಸಿದ ದಿನಾಂಕಃ 21–11–2024**

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

ಫ್ರಾ ಸಾ –1 ರವರು ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಹೌದು. ನಾನು ಫ್ರಾ ಸಾ –1 ರವರ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮೆಕ್ಕೆ ಜೋಳ ಬೆಳೆ 6–7 ಅಡಿ ಎತ್ತರದಲ್ಲಿ ಬೆಳೆಯುತ್ತದೆ ಎಂದರೆ ಹೌದು. ಜೋಳ ಬೆಳೆಯುವ ಗದ್ದೆಯೇ ಬೇರೆ ,ಕಣ ಮಾಡಿಟ್ಟ ಜಾಗವೇ ಬೇರೆ , ಟ್ರ್ಯಾಕ್ಟರ್ ನಿಂತ ಜಾಗವೇ ಬೇರೆ ಎಂದರೆ ಸರಿಯಲ್ಲ. ಫ್ರಾ ಸಾ –1 ರವರು ಜೋಳವನ್ನು ಟ್ರಾಕ್ಟರ್ ಗೆ ತುಂಬಿಕೊಂಡು ಬರುತ್ತಿದ್ದರು. ನಾನು ಇದ್ದ ಜಾಗದಿಂದ ಜೋಳ ತುಂಬುವ ಜಾಗಕ್ಕೆ ಅಂದಾಜು 10 ಅಡಿ ದೂರ ಇರಬಹುದು. ನಾನು ನಿಂತು ಜೋಳ ಕೊಯ್ಯುತ್ತಿದ್ದ ಜಾಗಕ್ಕೂ ಟ್ರಾಕ್ಟರ್ ಅಡ್ಡಗಟ್ಟಿದ ಜಾಗಕ್ಕೂ 10 ಅಡಿ ದೂರ ಇತ್ತು.

ಫ್ರಾ ಸಾ –1 ಮತ್ತು ಆರೋಪಿಯ ಜಮೀನಿನ ನಡುವೆ ಬೇರೆಯವರ ಜಮೀನು ಇದೆ ಎಂದರೆ ಹೌದು. ನಾನು ಫ್ರಾಸಾ–1 ರವರ ಜಮೀನಿನಲ್ಲಿ ಜೋಳ ಕೊಯ್ಯುತ್ತಿದ್ದೆ ಎಂದರೆ ಹೌದು. ಸದರಿ ಟ್ರಾಕ್ಟರ್ ಆರೋಪಿಯ ಜಮೀನಿನಲ್ಲಿ ನಿಲ್ಲಿಸಿದ್ದರು ಎಂದರೆ ಹೌದು. ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ. ಘಟನೆಯ ಹಿಂದಿನ ದಿನ ಮಳೆ ಬಂದಿತ್ತು ಎಂದರೆ ಸರಿಯಲ್ಲ. ಜೋಳದ ಸಾಲು ಇರುವ ಭೂಮಿಯಿಂದ ಸ್ವಲ್ಪ ಎತ್ತರವಾಗಿ ಬೆಳೆಯುತ್ತಾರೆ ಎಂದರೆ ಹೌದು. ಸದರಿ ಜೋಳವನ್ನು ತುಂಬಿಕೊಂಡು ಸದರಿ ಜಮೀನಿನಲ್ಲಿ ಹೋಗುವಾಗ

ಸದರಿ ಟ್ರಾಕ್ಟರ್  ಹೋಗುವಾಗ ಆ ಕಡೆ ಈ ಕಡೆ ಜೋಲಿ ಹೊಡೆಯುತ್ತಿರುತ್ತದೆ ಎಂದರೆ ಸರಿಯಲ್ಲ.  ಘಟನೆಯ ದಿನ ಟ್ರಾಕ್ಟರ್ ನಲ್ಲಿ ಪ್ರಾ ಸಾ –1, ಪ್ರಾ ಸಾ –2 , ಪ್ರಾ ಸಾ –4, ಚಾಸಾ 11 ರವರು ಇದ್ದರು. ಪ್ರಾ ಸಾ –2 ರವರು ಟ್ರಾಕ್ಟರ್ ಓಡಿಸುತ್ತಿದ್ದು ಪ್ರಾ ಸಾ –1 ರವರು ಅವರ ಪಕ್ಕ ಕುಳಿತಿದ್ದು , ಚಾಸಾ–11 ಮತ್ತು ಪ್ರಾ ಸಾ 4 ರವರು ಟ್ರಾಕ್ಟರ್ ನಲ್ಲಿ ಇದ್ದಂತಹ ಜೋಳದ ಮೇಲೆ ಕೂತಿದ್ದರು.  ಟ್ರಾಕ್ಟರ್  ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತಿತ್ತು ಎಂದು ಗೊತ್ತಿಲ್ಲ.

ಟ್ರಾಕ್ಟರ್ ಇದ್ದಂತಹ ಜಾಗದಿಂದ 10 ಅಡಿ ದೂರದಲ್ಲಿ ಆರೋಪಿ ಇದ್ದರು. ಆರೋಪಿಯು ತನ್ನ ಗದ್ದೆಯಲ್ಲಿ ಕೆಲಸ ಮಾಡುವಾಗ ಆತನ ಕೈಯ್ಯಲ್ಲಿ ಏನು ಆಯುಧಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಆರೋಪಿಯು ಟ್ರಾಕ್ಟರ್ ನ್ನು ಅಡ್ಡ ಹಾಕಿದಾಗ  ಪ್ರಾಸಾ–2 ಟ್ರಾಕ್ಟರ್ ನಿಲ್ಲಿಸಿ ಕೆಳಗಡೆ ಇಳಿದಿರುತ್ತಾನೆ. ಆ ಸಮಯದಲ್ಲಿ ಪ್ರಾ ಸಾ1 ರವರು ಟ್ರಾಕ್ಟರ್ ಮೇಲೆ ಕುಳಿತಿದ್ದರು. ಪ್ರಾ ಸಾ 4 ಮತ್ತು ಚಾಸಾ11 ರವರು ಸಹ ಟ್ರಾಕ್ಟರ್ ಮೇಲೆ ಕೂತಿದ್ದರು.  ಆರೋಪಿ ಮತ್ತು ಪ್ರಾ ಸಾ –2 ರವರು 15 ನಿಮಿಷ ಬೈದಾಡಿಕೊಳ್ಳುತ್ತಿದ್ದರು. ಆ ರೀತಿ ಮಾತುಕತೆಯಾಗುವಾಗ ಉಳಿದವರೆಲ್ಲಾರೂ ಟ್ರಾಕ್ಟರ್ ನಲ್ಲಿ ಕೂತಿದ್ದರು.

ಮು ಮಾ 1 ದೊಣ್ಣೆ  ಆರೋಪಿ ನಿಂತ ಸ್ಥಳದಿಂದ 2 ಅಡಿ ದೂರದಲ್ಲಿ ಬಿದ್ದಿತ್ತು. ನಾನು ಪ್ರಾ ಸಾ –1 ರವರ ಜೋಳದ ಜಮೀನಿನಲ್ಲಿದ್ದ ಕಾರಣ ಪ್ರಾಸಾ 2 ಮತ್ತು ಆರೋಪಿ ನಡುವೆ ಏನೆಲ್ಲಾ ಮಾತುಕತೆ ಆಯಿತುಎಂದು ನಾನು ನೋಡಿಲ್ಲ.  ನಾನು ಟ್ರಾಕ್ಟರ್ ನಿಲ್ಲಿಸಿದ ಜಾಗಕ್ಕೆ ಹೋಗುವ ಮೊದಲು ಏನೆಲ್ಲಾ ಆಯಿತು ಎಂದು ನನಗೆ ಗೊತ್ತಿಲ್ಲ.  ನಾನು ಸ್ಥಳಕ್ಕೆ ಬಂದ ನಂತರ ಪ್ರಾ ಸಾ2 ರವರಿಗೆ ಪೆಟ್ಟಾಗಿದೆ ಎಂದು ಗೊತ್ತಾಯಿತು.

ಗದ್ದೆಯಲ್ಲಿ ಬೇಲಿ ಕಟ್ಟಲು ಗೂಟಗಳನ್ನು ಚೂಪು ಮಾಡಿ ನಿಲ್ಲಿಸುತ್ತೇವೆ ಎಂದರೆ ಒಬ್ಬೊಬ್ಬರು ಚೂಪು ಮಾಡುವುದಿಲ್ಲ. ಗೂಟಗಳಿಗೆ ಯಾರೂ ಮೊಳೆ ಹೊಡೆಯುವುದಿಲ್ಲ ಎಂದರೆ ಕೆಲವರು ಹೊಡೆಯುತ್ತಾರೆ ಕೆಲವರು ಹೊಡೆಯುವುದಿಲ್ಲ. ಮರದ ಗೂಟಕ್ಕೂ ಬಿದಿರಿನ ಗೂಟಕ್ಕೂ ವ್ಯತ್ಯಾಸ ಇದೆ ಎಂದರೆ ಹೌದು. ನಿಪಿ – 7 ರಲ್ಲಿ ಕಂಡು ಬರುವ ಒಬ್ಬ ವ್ಯಕ್ತಿಯು ಹಿಡಿದಂತಹ ಗೂಟ ಶದು ಬಿದಿರಿನ ಗೂಟ ಎಂದರೆ ಹೌದು. ನಿಪಿ 7 ರಲ್ಲಿ ಯಾವುದೇ ರಸ್ತೆ ಕಂಡುಬರುವುದಿಲ್ಲ ಎಂದರೆ ಹೌದು.

ಮು ಮಾ1 ನ್ನು ಜಮೀನಿನಲ್ಲಿ ನಿಲ್ಲಿಸಲು ಆಗುವುದಿಲ್ಲ ಎಂದರೆ ಹೌದು. ಗೂಟವನ್ನು ಮಣ್ಣಲ್ಲಿ ನಿಲ್ಲಿಸಿದಾಗ ಸಾಮಾನ್ಯವಾಗಿ ಗೂಟಕ್ಕೆ ಮಣ್ಣು ಅಂಟಿಕೊಂಡಿರುತ್ತದೆ ಎಂದರೆ ಹೌದು. ಮು ಮಾ 1 ರಲ್ಲಿ ಮಣ್ಣಿನ ಅಂಶ ಇಲ್ಲ ಎಂದರೆ ಸರಿಯಲ್ಲ. ಮು ಮಾ 1 ರಲ್ಲಿ ಮಣ್ಣಿನ ಅಂಶ ಇಲ್ಲ ನಾನು ಮಣ್ಣು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ನಿಲ್ಲಿಸುವಂತಹ ಗೂಟಕ್ಕೆ ಎಲ್ಲಾ ಕಡೆ ಮೊಳೆ ಹೊಡೆಯುವುದಿಲ್ಲ ಎಂದರೆ ಸರಿಯಲ್ಲ. ಮು ಮಾ –1 ಮರದ ಗೂಟ ಎಂದರೆ ಹೌದು. ಒಂದು ವಾರ ಬಿಟ್ಟು ಪೋಲೀಸ್ ಠಾಣೆಗೆ ನನ್ನನ್ನು ಕರೆಸಿ ನನಗೆ ಮು ಮಾ1 ನ್ನು ಪೋಲೀಸರು ತೋರಿಸಿರುತ್ತಾರೆ.

ಆರೋಪಿ ಮೊದಲಿನಿಂದಲೂ ಕಾಲು ಊನ ಆಗಿ ಅಂಗವಿಕಲನಾಗಿದ್ದು ಆತನಿಗೆ ನಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊದಲು ನೋಡಿದಾಗ ಆರೋಪಿ ಚೆನ್ನಾಗೇ ನಡೆಯುತ್ತಿದ್ದರು ಈಗ ಹೇಗೆ ನಡೆಯುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ

ಮತ್ತು ಪ್ರಾ ಸಾ –2 ರವರ ನಡುವೆ ಗಲಾಟೆಯಾಗುವ ಸಮಯದಲ್ಲಿ ಟ್ರಾಕ್ಟರ್ ಮೇಲೆ ಇದ್ದ ವ್ಯಕ್ತಿಗಳು ತಡೆಯಲು ಪ್ರಯತ್ನಪಟ್ಟರಾ ಎಂದರೆ ಅವರ ನಡುವೆ ಮಾತುಕತೆಯಾಗುತ್ತಿದೆ ಎಂದು ಇಳಿಯಲಿಲ್ಲ ಆರೋಪಿ ಪ್ರಾ ಸಾ–2 ರವರಿಗೆ ಹೊಡೆದ ನಂತರ ಸದರಿಯವರು ಟ್ರಾಕ್ಟರ್ ನಿಂದ ಇಳಿದಿರುತ್ತಾರೆ. ಸದರಿ ಜಮೀನಿನಲ್ಲಿ ರಸ್ತೆ ಇಲ್ಲದಿದ್ದ ಕಾರಣ ಜೋಳವನ್ನು ತುಂಬಿಸಿಕೊಂಡು ಹೋಗುವಾಗ ಟ್ರಾಕ್ಟರ್ ಆ ಕಡೆ ಈ ಕಡೆ ಜೋಲಿ ಹೊಡೆದು ಪಲ್ಟಿಯಾಗಿ ಪ್ರಾ ಸಾ 2 ರವರ ತಲೆಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಾ ಸಾ 2 ರವರ ತಲೆಗೆ ಆರೋಪಿಂನು ಮು ಮಾ 1 ರಿಂದ ಹೊಡೆದಿಲ್ಲ ಆದರೆ ಟ್ರಾಕ್ಟರ್ ಪಲ್ಟಿಯಾಗಿ ಅದರ ಇಂಜಿನ್ ಪ್ರಾ ಸಾ2 ರವರ ತಲೆಗೆ ತಾಗಿ ಪೆಟ್ಟಾಗಿರುತತದೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಪ್ರಾಸಾ2 ರವರ ಜಮೀನಿಗೆ ಜೋಳ ಮುರಿಯಲು ಹೋಗಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಆರೋಪಿಯು ಪ್ರಾಸಾ2 ರವರಿಗೆ ಮು ಮಾ1 ರಿಂದ ಹೊಡೆಯಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮು ಮಾ1 ದೊಣ್ಣೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ದಿನ ಪ್ರಾ ಸಾ1 ರವರ ಜಮೀನಿಗೆ ನಾನು ಕೆಲಸಕ್ಕೆ ಹೋಗಿಲ್ಲ, ಘಟನೆಯನ್ನು ನೋಡಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).